**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಬಸವನ-ಬಾಗೇವಾಡಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 611/2023.**

**D.W.-1**

**ಸಾಕ್ಷಿಗೆ ದಿನಾಂಕ 23.07.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಹೆಸರು ಃ ಅಪ್ಪು ತಂ. ಶಂಕರ ಲಮಾಣಿ

ವಯಸ್ಸು ಃ 34 ವರ್ಷ

ಉದ್ಯೋಗ ಃ ವ್ಯಾಪಾರ ಮತ್ತು ವ್ಯವಸಾಯ

ವಾಸಸ್ಥಳ ಃ ಉಪ್ಪಲದಿನ್ನಿ

**ಮುಂದುವರೆದ ಮುಖ್ಯವಿಚಾರಣೆ ಆರೋಪಿ ಪರ ಶ್ರೀಮತಿ. ಎಸ್. ಆರ್. ಜೆ. ವಕೀಲರಿಂದಃ-**

**3.** ನಾನು ಪಿರ್ಯಾದಿಯಿಂದ ಯಾವುದೇ ಹಣ ಪಡೆದಿಲ್ಲ. ನನ್ನ ಮತ್ತು ಪಿರ್ಯಾದಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇಲ್ಲ. ದಿಃ 27.07.2021 ರಂದು ಪಿರ್ಯಾದಿ ನನಗೆ ಯಾವುದೇ ಹಣ ನೀಡಿಲ್ಲ. ಪಿರ್ಯಾದಿ ನನ್ನ ಸಂಬಂಧಿಕನಾದ ಕಾರಣ ನನಗೆ ತೊಂದರೆ ಮಾಡಬೇಕೆಂಬ ಉದ್ದೇಶದಿಂದ ನನ್ನ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡದಿದ್ದಾನೆ. ನಾನು J.C.B, Concrete mixer ಮತ್ತು Ertiga ಕಾರನ್ನು ಬ್ಯಾಂಕಿನಿಂದ ಸಾಲ ಮಾಡಿ ಖರೀದಿಸಿದ್ದೇನೆ. ನಾನು ಯಾರಿಂದಲೂ ಸದರಿ ವಸ್ತುಗಳನ್ನು ಖರೀದಿಸಲು ಕೈಸಾಲ ಪಡೆದಿಲ್ಲ. ನಾನು ಸದರಿ ಬ್ಯಾಂಕಿನ ಸಾಲವನ್ನು ಮರು ಪಾವತಿ ಮಾಡಿದ್ದೇನೆ.

**4.** ನಾನು ಮಣ್ಣೂರ ಗ್ರಾಮದ ಸರ್ವೆ ನಂ. 249/8 ರಲ್ಲಿ 3 ಎಕರೆ 6 ಗುಂಟೆ ಜಮೀನನ್ನು ನನ್ನ ಸ್ವಂತ ಹಣದಲ್ಲಿ ಖರೀದಿಸಿದ್ದೇನೆ. ಸದರಿ ಜಮೀನನ್ನು ನೀರಾವರಿ ಮಾಡಿಸಲು ಬ್ಯಾಂಕಿನಿಂದ ಸಾಲ ಪಡೆದಿದ್ದೇನೆ. ಜುಲೈ-2022 ರಲ್ಲಿ ನಮ್ಮ ಮನೆಯಿಂದ 578105, 578106 ಮತ್ತು 578107 ಎಂಬ ನಾನು ಸಹಿ ಮಾಡಿ ಇಟ್ಟ ನನ್ನ ಮೂರು ಚೆಕ್ಕುಗಳು ಕಳೆದುಹೋಗಿರುತ್ತವೆ. ಈ ಹಂತದಲ್ಲಿ ಆರೋಪಿ ಪರ ವಕೀಲರು ಚಕ್ಕ ನಂಬರನ್ನು ಮತ್ತೊಂದು ಸಲ ಹೇಳಲು ಹೇಳಿದಾಗ, ಆರೋಪಿಯು ಸದರಿ ಮೂರು ಚೆಕ್ಕುಗಳು ನಂಬರ 571805, 571806

ಮತ್ತು 571807 ಎಂದು ನುಡಿಯುತ್ತಾರೆ.

**5.** ನಾನು ನ್ಯಾಯಾಲಯಕ್ಕೆ ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಗಿದೆ.

| **ನಿಶಾನೆ ಡಿ.** | **ದಾಖಲೆಗಳು** |
|---|---|
| 2. | C.C. No.612/2023 ರಲ್ಲಿನ PW-1 ರವರ ಸಾಕ್ಷಿ ವಿಚಾರಣೆಯ ದೃ.ನ. |
| 3. | ದಿಃ 23.01.2023 ರ ನೋಟೀಸಿನ ಕಛೇರಿ ಪ್ರತಿ |
| 4. | ಅಂಚೆ ರಶೀದಿ, |
| 5. | ಅಂಚೆ ಸ್ವೀಕೃತಿ ಪತ್ರ. |
| 6. | ದಿಃ 23.03.2023 ರ ಪಿರ್ಯಾದಿ ನೀಡಿದ ಮರು ಉತ್ತರ |
| 7. | ದಿಃ 23.03.2023 ರ ಪಿರ್ಯಾದಿ ನೀಡಿದ ನೋಟೀಸಿನ ಕಛೇರಿ ಪ್ರತಿ. |
| 8. | ದಿಃ 27.03.2023 ರ ಆರೋಪಿ ನೀಡಿದ ಮರು ಉತ್ತರದ ಕಛೇರಿ ಪ್ರತಿ. |
| 9. | ಅಂಚೆ ರಶೀದಿ, |
| 10. | ಅಂಚೆ ಸ್ವೀಕೃತಿ ಪತ್ರ. |
| 11. | ದಿಃ 25.07.2022 ರ ನೋಂದಾಯಿತ ಖರೀದಿ ಪತ್ರದ ದೃ.ನ. |
| 12. | ಬಿ ರಿಜಿಸ್ಟ್ರರ್ extract (Loading concrete mixer) |
| 13. | ಬಿ ರಿಜಿಸ್ಟ್ರರ್ extract (Ertiga Car) |
| 14. | ಬಿ ರಿಜಿಸ್ಟ್ರರ್ extract (J.C.B-3DX) |

**ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಬಸವನ-ಬಾಗೇವಾಡಿ.**